ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 2324/2018 ಪಿಡಬ್ಲ್ಯೂ-1

ದಿನಾಂಕಃ- 08-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ.ವೈಕೆ ವಕೀಲರಿಂದಃ-**

ನಾನು ವ್ಯವಸಾಯ ಮತ್ತು ಎಳನೀರು ವ್ಯಾಪಾರ ಮಾಡುತ್ತೇನೆ. ಆರೋಪಿಯು ಕುದುರಗುಂಡಿ ಗ್ರಾಮದವರು. ಆರೋಪಿ ನೀಡಿರುವ ಚೆಕ್ ಸಿಂಡಿಕೇಟ್ ಬ್ಯಾಂಕ್ ದ್ದಾಗಿರುತ್ತದೆ. ಆರೋಪಿಯು ಬಸ್ ಕಂಡಕ್ಟರ್ ಆಗಿರುತ್ತಾರೆ. ಆರೋಪಿ ನನಗೆ 2015 ರಿಂದ ಪರಿಚಯ. ನಾನು ಆಗಾಗ್ಗೆ ಕುದುರಗುಂಡಿಗೆ ಹೋಗುತ್ತಿದ್ದೆ. ಆಗ ಪರಿಚಯವಾಗಿರುತ್ತಾರೆ. ಆರೋಪಿ ಕೆಎಸ್ ಆರ್ ಟಿಸಿ ಕಂಡಕ್ಟರ್ ಆಗಿದ್ದು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆಂದರೆ ಸರಿಯಲ್ಲ, ಅವರು ಕುದುರಗುಂಡಿಗೆ ಹೋಗಿ ಬಂದು ಮಾಡುತ್ತಾರೆ ಎನ್ನುತ್ತಾರೆ. ನಾನು ದಿ 20-06-2018 ರಂದು ಆರೋಪಿಗೆ ಹಣ ಕೊಟ್ಟಿರುತ್ತೇನೆ, ಅದಕ್ಕಿಂತ 15 ದಿನಗಳ ಮೊದಲು ಆರೋಪಿಯು ದೇಶಹಳ್ಳಿಯಲ್ಲಿ ಹಣ ಕೇಳಿರುತ್ತಾರೆ. ಆರೋಪಿ ಹಣ ಕೇಳಿದ ದಿನವೇ ಹಣ ಕೊಡಲು ತೊಂದರೆ ಇರಲಿಲ್ಲ. ಆರೋಪಿಗೆ ಹಣ ಕೊಡುವ ದಿನ ಚೆಕ್ ಕೇಳಿರಲಿಲ್ಲ. ಆರೋಪಿಯು ಹಣ ಪಡೆದ ದಿನ ಭದ್ರತೆಗಾಗಿ ಆನ್ ಡಿಮ್ಯಾಂಡ್ ಪ್ರನೋಟ್ ಕೊಟ್ಟಿರುತ್ತಾರೆ, ನಂತರ ಅದನ್ನು ಹಿಂಪಡೆದು ಚೆಕ್ ಕೊಟ್ಟಿರುತ್ತಾರೆ. ಪ್ರನೋಟ್ ನ್ನು ಯಾರು ಬರೆದಿರುತ್ತಾರೆಂದು ಗೊತ್ತಿಲ್ಲ. ಸದರಿ ದಾಖಲೆಗೆ ಆರೋಪಿ, ಅವರ ಹೆಂಡತಿ, ಅವರ ತಾಯಿ ಸಹಿ ಮಾಡಿರುತ್ತಾರೆ. ಆ ವಿಚಾರವನ್ನು ನಾನು ನೋಟೀಸ್ ನಲ್ಲಿ, ದೂರಿನಲ್ಲಿ ತಿಳಿಸಿಲ್ಲ, ತಿಳಿಸಲು ತೊಂದರೆ ಇರಲಿಲ್ಲ. ಆರೋಪಿಗೆ ಬಡ್ಡಿಗಾಗಿ ಹಣ ಕೊಟ್ಟಿರುವುದಿಲ್ಲ. ಪ್ರನೋಟ್ ನಲ್ಲಿ ಬಡ್ಡಿಯ ಬಗ್ಗೆ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರನೋಟ್ ನ ಪ್ರತಿ ನನ್ನ ಬಳಿ ಇಲ್ಲ. ಪ್ರನೋಟ್ ಗೆ ಸಂಬಂಧಪಟ್ಟಂತೆ ನಾನು ವಕೀಲರ ಮೂಲಕ ನೋಟೀಸ್ ನೀಡಿಲ್ಲ. ಆರೋಪಿಯನ್ನು ಹಣ ಕೇಳಿದಾಗ ನನಗೆ ಅವರು ಪ್ರನೋಟ್ ಪಡೆದು ಚೆಕ್ ಕೊಟ್ಟಿರುತ್ತಾರೆ. ದಿ 20-06-2018 ರಂದು ಚೆಕ್ ಕೊಟ್ಟಿರುತ್ತಾರೆ, ಆ ದಿನಾಂಕದಿಂದ 2 ತಿಂಗಳ ಹಿಂದೆಯೇ ಪ್ರನೋಟ್ ಬರೆದು ಕೊಟ್ಟಿದ್ದರು.

ಆರೋಪಿಯನ್ನು ಚೆಕ್ ಅನೂರ್ಜಿತವಾದಾಗ ನಾನು ಸಾಲದ ಹಣ ಕೇಳಿರುತ್ತೇನೆ, ಅವರು ಇಲ್ಲದ ಸಬೂಬು ಹೇಳಿರುತ್ತಾರೆ. ಚೆಕ್ ನ್ನು ದಿ 23-08-2018 ರಂದು ದಾಖಲಿಸಿರುತ್ತೇನೆ. ಚೆಕ್ ಬೌನ್ಸ್ ಆದ ನಂತರ ಆರೋಪಿಯನ್ನು 3 ಬಾರಿ ಹಣ ಕೇಳಿರುತ್ತೇನೆ. 2018 ರ ದಿನಾಂಕ 26, 27 ರಂದು ಹಣ ಕೇಳಿರುತ್ತೇನೆ. ನಾನು ಹೋದಾಗ ಆರೋಪಿ ಸಿಕ್ಕಿದ್ದರು. ಆದಾದ ನಂತರ ನಾನು ಆರೋಪಿಗೆ ನೋಟೀಸ್ ಕೊಟ್ಟಿರುತ್ತೇನೆ. ಆರೋಪಿ ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ನೋಟೀಸ್ ಕಳುಹಿಸಲು ತೊಂದರೆ ಇರಲಿಲ್ಲ. ನಾನು ನೀಡಿದ ನೋಟೀಸ್ ಆರೋಪಿಗೆ ಜಾರಿಯಾಗಿದೆ. ಆ ಬಗ್ಗೆ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-5 ಅದೇ ಹಿಂಬರಹವಾಗಿರುತ್ತದೆ. ನಿಪಿ-5 ರಲ್ಲಿ ಅನಿತ್

ಎಂ.ಇ ಎಂದು ಇದೆ ಎಂದರೆ ಅದು ಆರೋಪಿಯ ಹೆಂಡತಿಯಾಗಿರುತ್ತಾರೆ ಎನ್ನುತ್ತಾರೆ. ಆ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ. ಅನಿತ್ ಎಂಇ ಎಂಬುವವರು ಆರೋಪಿಯ ಹೆಂಡತಿ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದೂರನ್ನು ಆರೋಪಿಗೆ ಜಾರಿ ಮಾಡದೇ ಅನಿತಾ ಎಂಬುವವರಿಂದ ಸಹಿ ಮಾಡಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ಜಾರಿ ಮಾಡಿದ್ದರೆ ಕಾನೂನು ಕ್ರಮ ಕೈಗೊಳ್ಳುತ್ತಿದ್ದರು, ನೋಟೀಸ್ ಜಾರಿಯಾಗದ ಕಾರಣ ಆರೋಪಿ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ  ಕೆಲಸ ಮಾಡುವ ಕಡೆ ನೋಟೀಸ್ ಕಳುಹಿಸಿದ್ದರೆ ಅದು ಜಾರಿಯಾಗುತ್ತಿತ್ತು, ಆರೋಪಿಗೆ ಗೊತ್ತಾಗುತ್ತಿತ್ತು, ಅದು ಉದ್ದೇಶಪೂರ್ವಕವಾಗಿ ಕೆಲಸ ಮಾಡುವ ಸ್ಥಳಕ್ಕೆ ನೋಟೀಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ.

ನಾನು 10 ನೇ ತರಗತಿ ಓದಿದ್ದೇನೆ.  ಚೆಕ್ ನಲ್ಲಿರುವ ಸಹಿ ಮತ್ತು ಇಂಕಿನಲ್ಲಿ ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ. ಇದು ಬೇರೆ ಬೇರೆ ವ್ಯಕ್ತಿಗಳ ಬರಹ ಎಂದರೆ ಸರಿಯಲ್ಲ. ನಾನು ಎಳನೀರು ವ್ಯಾಪಾರ ಮಾಡುತ್ತೇನೆ,ಅದರಿಂದ ಆದಾಯ ಇರುತ್ತದೆ, ಮನೆಯಲ್ಲಿ ಹಣ ಇಟ್ಟಿದ್ದೆ. ನನಗೆ ಪಡಿತರ ಚೀಟಿ ಇದೆ. ನಾನು ಆರೋಪಿಯನ್ನು ಬಿಟ್ಟು ಮತ್ತೆ ಬ್ಬರ ವಿರುದ್ಧ ಚೆಕ್ ಪ್ರಕರಣ ದಾಖಲು ಮಾಡಿರುತ್ತೇನೆ. ನಾನು ಹಣ ನೀಡಿದ ದಿನ ನನ್ನ ಬಳಿ ಹಣವಿತ್ತು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಬಳಿ ಹಣ ಇದ್ದರೆ ಆರೋಪಿ ಕೇಳಿದ ದಿನವೇ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೇಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**Prays time for further cross examination.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್  ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ